# ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್

ಖಾಸಗಿ ಪ್ರಸಾರಕ್ಕೆ ಕೊಪ್ಪ ೨೩-೫-೮೭ ಭಾನುವಾರ ೧೭


## ಹಣ ದ್ವಿಗುಣ ವಂಚನೆ ಪತ್ತೆ

ಶೃಂಗೇರಿ: ೧೫ ಸಾವಿರಕ್ಕೆ ೩೦ ಸಾವಿರ ರೂ. ಕೊಡುವುದಾಗಿ ಹೇಳಿ ವ್ಯಕ್ತಿಯೊಬ್ಬರನ್ನು ವಂಚಿಸಲು ಯತ್ನಿಸಿದ ಇಲ್ಲಿನ ಕೃಷ್ಣರಾಜ್ ಮತ್ತು ಕೊಪ್ಪದ ಅಬ್ದುಲ್ ಹಮೀದ್ ಎಂಬಿಬ್ಬರನ್ನು ಸುಂದರ ಎಂಬುವವರು ಠಾಣೆಯಿಂದ ನೀಡಿದ ಸುಳಿವಿನ ಮೇಲೆ ಶೃಂಗೇರಿ ಪೊಲೀಸರು ಬಂಧಿಸಿದ್ದಾರೆ. ೨೦ರೂ. ನೋಟನ್ನು ಹೋಲುವ ಕಾಗದಗಳ ೩ ಕಟ್ಟುಗಳನ್ನು ಅವರಿಂದ ವಶಪಡಿಸಿಕೊಳ್ಳಲಾಗಿದೆ.

## ಹಾಸನ-ಶೃಂಗೇರಿ ಬಸ್ ಸಂಚಾರ ಪುನರಾರಂಭಕ್ಕೆ ಸಂಧಾನ ಯತ್ನ

**ಶೃಂಗೇರಿ: ಜನವರಿ ಪುನರಾರಂಭಗೊಂಡಿದ್ದ ಹಾಸನ-ಶೃಂಗೇರಿ ಸರ್ಕಾರಿ ಬಸ್ಸಿನ ಓಡಾಟಕ್ಕೆ ಶಂಕರ್ ಕಂಪನಿಯವರು ಪುನಃ ತಡೆಯಾಜ್ಞೆ ತಂದಿದ್ದು, ಈ ಮಾರ್ಗದ ಜನ ನಿಧಾನವಾಗಿ ರೊಚ್ಚಿಗೇಳುತ್ತಿರುವ ಹಿನ್ನೆಲೆಯಲ್ಲಿ, ಪ್ರಕರಣವನ್ನು ಕಂಪನಿ ಕೈ ಬಿಡುವಂತೆ ಮಾಡಲು ಸಂಧಾನ ಯತ್ನವೊಂದು ನಡೆದಿದೆ.**

ಮೇ ೫ ರಂದು ಮುಖ್ಯಮಂತ್ರಿಗಳು ಶೃಂಗೇರಿಗೆ ಬಂದಿದ್ದ ಸಂದರ್ಭದಲ್ಲಿ ತಾ|| ಕಾಂಗ್ರೆಸ್ ಅಧ್ಯಕ್ಷ ಕೆ. ಆರ್. ಅಣ್ಣಯ್ಯ ಹೆಗ್ಡೆ, ಪುರಸಭಾಧ್ಯಕ್ಷ ಎನ್. ಎಸ್. ಚಂದ್ರಶೇಖರ್ ಮುಂತಾದವರು ಬೇಗಾನೆ ರಾಮಯ್ಯನವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಶಂಕರ್ ಕಂಪನಿ ಮಾಲೀಕ ವರ್ಗದ ಹಿರಿಯರಾದ ಶ್ರೀಪತಿರಾವ್ ಗುಂಡೂರಾಯರನ್ನು ಭೇಟಿ ಮಾಡಲು ಇದೇ ಸಂದರ್ಭದಲ್ಲಿ ಬಂದಿದ್ದು, ಆಗ ವಿಷಯವನ್ನು ಚರ್ಚಿಸಲಾಯಿತು. ಈ ಬಗ್ಗೆ ಕಂಪನಿಯಲ್ಲಿ ವಿಚಾರಿಸುವುದಾಗಿ ಶ್ರೀಪತಿರಾವ್ ಭರವಸೆ ಕೊಟ್ಟಿದ್ದರು.

ಕಂಪನಿಯ ಟೆಕ್ನಿಕಲ್ ಡೈರೆಕ್ಟರ್ ಎ. ಮನೋಹರರಾಯರನ್ನು ವಿಚಾರಿಸಿದಾಗ 'ಅಣ್ಣಾನವರು ಹಾಗೆ ವಿಚಾರಿಸಿದ್ದು ನಿಜ. ಆದರೆ ಪ್ರಕರಣವನ್ನು ಹಿಂದೆಗೆದುಕೊಳ್ಳುವ ಬಗ್ಗೆ ಏನು ನಿರ್ಧಾರವಾಗಿದೆ ಎಂಬುದು ಮ್ಯಾನೇಜಿಂಗ್ ಡೈರೆಕ್ಟರ್ ರಮೇಶರಾಯರಿಗೇ ಗೊತ್ತು' ಎಂದರು. "ಬಸ್ಸನ್ನು ನಾವು ನಿಲ್ಲಿಸಿದ್ದೇವೆಂಬುದು ಸರಿಯಲ್ಲ. ನಮ್ಮ ಹಿತಾಸಕ್ತಿಗೆ ಧಕ್ಕೆ ಬಂದಾಗ ನಮಗೆ ನಷ್ಟ ಆಗದಂತೆ ಕ್ರಮ ತೆಗೆದುಕೊಳ್ಳುವುದು ನಮ್ಮ ಹಕ್ಕು" ಎಂದೂ ಅವರು ಹೇಳಿದರು.

## ಶೃಂಗೇರಿ: ರೈತಸಂಘದ ಮೆರವಣಿಗೆ

ಶೃಂಗೇರಿ, ಮೇ೨೨: ರಾಜ್ಯ ರೈತ ಸಂಘ ಮುಂಡಿಸಿರುವ ೧೯ ಬೇಡಿಕೆಈಡೇರಿಕೆ, ಗ್ರಾ. ಅ. ಯೋ. ಸಾಲಗಳ ಶೀಘ್ರ ವಿತರಣೆ, ಒಣ ಕಟ್ಟೆಗೆಗೆ ಹಾಗೂ ಅಕ್ಕಿ ಮಾಡಿಸಲು ಮುಕ್ತ ಅವಕಾಶ, ಗೋಕಾಕ್ ವರದಿ ಪೂರ್ಣ ಅನುಷ್ಠಾನ ಮುಂತಾದ ೧೦ ಅಂಶಗಳ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ೪೦೦ ಜನ ರೈತರು ದೊಡ್ಡ ಮೆರವಣಿಗೆ ನಡೆಸಿದರು. ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲು ತಾ|| ಕಚೇರಿಗೆ ಹೋದಾಗ, ಮೊದಲೇ ತಿಳಿಸಿದ್ದರೂ ತಹಸೀಲ್ದಾರ್ ರಜೆ ಹೋಗಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರೈತ ಸಂಘ, "ಇಂಥ ಹೊಣೆಗೇಡಿತನದ ಪರಿಣಾಮ ಉಗ್ರವಾದೀತೆಂದು" ಎಚ್ಚರಿಕೆ ನೀಡಿತು.

## ಆರೋಪ ನಿರಾಧಾರ: ನೀಲಕಂಠ ಭಟ್ಟರ ಹೇಳಿಕೆ

೯-೫-೮೭ ರ 'ದೀವಟಿಗೆ'ಯಲ್ಲಿ ಪ್ರಕಟವಾದ "ಹರಿಹರಪುರ ಪಂಚಾಯ್ತಿ ಅಧ್ಯಕ್ಷರ ವಿರುದ್ಧ ಅಧಿಕಾರ ದಾಹದ ಆರೋಪ" ಎಂಬ ವರದಿಗೆ ಹರಿಹರಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಜೆ. ಪಿ. ನೀಲಕಂಠ ಭಟ್ಟರು ಈ ಕೆಳಗಿನಂತೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಮಾನ್ಯರೇ,

ತಮ್ಮ ದಿ. ೯-೫-೮೭ರ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯದ ಬಗ್ಗೆ ನನಗೆ ತಿಳಿದ ವಿಷಯ ತಿಳಿಸುತ್ತೇನೆ.

೧. ಹರಿಹರಪುರ ವ್ಯ. ಸೇ. ಸ. ಸಂಘದ ಅಧ್ಯಕ್ಷ ಸ್ಥಾನಕ್ಕೆ ಆಸೆಪಟ್ಟು ಹಾಲೀ ಅಧ್ಯಕ್ಷರ ಮೇಲೆ ಹಲ್ಲೆ ನಡೆಸಿದ್ದಾಗಿ ಬರೆದ ವಿಚಾರ. ಈ ಬಗ್ಗೆ ನಿಜಸ್ಥಿತಿ ಹೀಗಿದೆ— ಅಧ್ಯಕ್ಷರು ನಿರ್ದೇಶಕರ ಮುಂದಿಲ್ಲದ ಚರ್ಚಿಸಿ ಒಪ್ಪಿಗೆ ಪಡೆಯದೇ ಪತ್ರಿಕಾ ಹೇಳಿಕೆಯೊಂದನ್ನು (ಅಧ್ಯಕ್ಷರ ಸೀಲಿನೊಂದಿಗೆ) ಕೊಟ್ಟಿದ್ದನ್ನು ಪ್ರಶ್ನಿಸಿದ ೩ ಜನ ನಿರ್ದೇಶಕರಿಗೆ ಅಧ್ಯಕ್ಷರು ನೋಟೀಸ್ ಜಾರಿ ಮಾಡಿದರು. ಇದನ್ನು ಇನ್ನೊಂದು ಸಭೆಯಲ್ಲಿ ನಿರ್ದೇಶಕರು ಪ್ರಶ್ನಿಸಿ, ಚರ್ಚೆಗೆ ತೆಗೆದರು. ಆಗ ಒಂದಿಬ್ಬರು ನಿರ್ದೇಶಕರ ಮಾತಿನಲ್ಲಿ ಬಿಸಿ ಏರಿತು.

(ಇನ್ನೂ ಇದೆ)

## ಆನೆಗುಂದ ಹಗರಣ: ಐವರಿಗೆ ಜಾಮೀನು

ಶೃಂಗೇರಿ: ಇಲ್ಲಿಗೆ ಸಮೀಪದ ಆನೆಗುಂದ ಅಗ್ರಹಾರದಲ್ಲಿ ಈಚೆಗೆ ನಡೆದಿರುವ ಕಳವು ಕೊಲೆ ಯತ್ನದ "ವಿವಿಧೋದ್ದೇಶ ಪ್ರಕರಣ"ಕ್ಕೆ ಸಂಬಂಧಪಟ್ಟಂತೆ ಬಂಧಿತರಾಗಿದ್ದ ಏಳು ಜನರಲ್ಲಿ ಐದು ಜನರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಶೃಂಗೇರಿ ಪೋಲೀಸರು ಮೊಕದ್ದಮೆ ದಾಖಲು ಮಾಡಿಕೊಂಡು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಆರೋಪಿಗಳ ಮುಖಂಡನೆಂದು ಹೇಳಲಾಗಿರುವ ಶಿವಶಂಕರನೂ ಸೇರಿದಂತೆ ಸುಬ್ರಮಣ್ಯ, ಸಂಜೀವ, ನವಾಬ್, ಅಲೀ ಸಾಬ್ ಇವರುಗಳಿಗೆ ಜಾಮೀನು ದೊರಕಿದೆ. ನೆಮ್ಮಾರಿನ ಸೋಮ ಹಾಗೂ ಕಿಗ್ಗದ ಹೂವ ಎಂಬಿಬ್ಬರು ಹರಿಜನರು ಜಾಮೀನು ಕೊಡುವವರಿಲ್ಲದೆ ನ್ಯಾಯಾಂಗ ಸುಪರ್ದಿನಲ್ಲಿ ನರಸಿಂಹರಾಜಪುರ ಉಪ ಬಂದೀಖಾನೆಯಲ್ಲಿದ್ದಾರೆ. (ಅವರನ್ನು ಭೇಟಿ ಮಾಡುವ ನಮ್ಮ ಮನವಿಗೆ ಅನುಮತಿ ದೊರೆಯಲಿಲ್ಲ.)

**"ದೀಡಿಟ್ಟಿದ್ದೇನೋ ನಿಜ ........"**

"ಮುಖವಾಡವನ್ನು ನಾನು ದೀಡಿಟ್ಟಿದ್ದೇನೋ ನಿಜ. ಆದೂ ೩ ತಿಂಗಳ ಹಿಂದೆಯೇ ಇಟ್ಟಿದ್ದು. ಯಾವುದೋ ಲೋನ್ ಅಡ್ಜೆಸ್ಟ್‌ಮೆಂಟ್‌ಗಾಗಿ" ಎಂದು ಒಪ್ಪಿಕೊಳ್ಳುವ ಮುಖ್ಯ ಆರೋಪಿ ಶಿವಶಂಕರ, ಉಳಿದಂತೆ ತಾನು ನಿರಪರಾಧಿ ಎಂದು ಹೇಳಿಕೊಳ್ಳುತ್ತಾನೆ. ಈ ಎಲ್ಲ ಹಗರಣಕ್ಕೆ "ಕೆ. ವಿ. ಆರ್‌"ರವರ ರಾಜಕೀಯ" ಹಾಗೂ ತನ್ನ ಮೇಲೆ ಕೆಲವರ ವೈಯುಕ್ತಿಕ ದ್ವೇಷ ಕಾರಣ ಎಂದು ಈತ ಹೇಳುತ್ತಾನೆ. ಈ ಬಗ್ಗೆ ಮಂತ್ರಿಗಳನ್ನೂ (ಬೇಗಾನೆ) ಕಂಡು ಬಂದಿರುವುದಾಗಿ ಹೇಳುತ್ತಾನೆ.

## ಗಂಗಯ್ಯನ ಮೇಲೆ ಪೋಲೀಸ್ ಹಲ್ಲೆ: ವ್ಯಾಪಕ ಪ್ರತಿಭಟನೆ

ಚಿಕ್ಕಮಗಳೂರು: ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ. ಡಿ. ಗಂಗಯ್ಯನವರ ಮೇಲೆ ಮೂಡಿಗೆರೆ ಸರ್ಕಲ್ ಇನ್ಸ್‌ಪೆಕ್ಟರ್ ಶರೀಫ್ ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ಮೇ ೭ ರಂದು ಮೂಡಿಗೆರೆಯಲ್ಲಿ ದ. ಸಂ. ಸ. ಏರ್ಪಡಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಶರೀಫ್‌ನ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿ ಸುಡಲಾಯಿತು. ಚಿಕ್ಕಮಗಳೂರಿನಲ್ಲಿ ಮೇ ೧೪ ರಂದು ೧ ದಿನ ಸಾಂಕೇತಿಕ ಧರಣಿ ನಡೆಸಿದ ೫೩ ಜನ ದಲಿತರನ್ನು ಬಂಧಿಸಲಾಯಿತು. ಅಂದು ರಾಜ್ಯಾದ್ಯಂತ ಪೋಲೀಸ್ ಕಚೇರಿಗಳ ಎದುರು ಧರಣಿ ನಡೆದಿರುವುದಾಗಿ ದ. ಸಂ. ಸ. ತಿಳಿಸಿದೆ.

**ಪ್ರಕಟವಾಗಲಿಲ್ಲ.....**

ಹಲವು ತೊಂದರೆಗಳಿಂದಾಗಿ ನಮ್ಮ ೧೬-೫-೮೭ ರ ಸಂಚಿಕೆ ಪೂರ್ತಿ ಅಚ್ಚಾಗಲಿಲ್ಲ. ಆದ್ದರಿಂದ ೧೬-೫-೮೭ ಹಾಗೂ ೨೩-೫-೮೭ ಕ್ಕೆ ಒಟ್ಟಾಗಿ ಒಂದೇ ಸಂಚಿಕೆ ಪ್ರಕಟವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ. —ಸಂ

## ಬೇಗಾನೆಗೆ ಚುರುಕು ಮುಟ್ಟಿಸಿದ ಕಾವಡಿ ಹರಿಜನರು

ಕಾವಡಿ: ಇಲ್ಲಿನ ಹರಿಜನ ಕೇರಿಯಲ್ಲಿ ಮೇ ೬ ರಂದು ಬೇಗಾನೆ ರಾಮಯ್ಯನವರು ಜ್ಞಾನ ಮಂದಿರ ಉದ್ಘಾಟಿಸಿದ ಸಂದರ್ಭದಲ್ಲಿ ಅವರಿಗೆ ಕಾವಡಿ ಮತ್ತು ಬೆಳಂದೂರು ಗ್ರಾಮಗಳ ಹರಿಜನರು 'ಚುರುಕು ಮುಟ್ಟಿಸಿದ್ದಾಗಿ' ಸ್ವಾರಸ್ಯದ ಸಂಗತಿಯೊಂದು ತಿಳಿದು ಬಂದಿದೆ.

**'ರಟ್ಟೆ ಹಿಡಿದು ಕೇಳಿ'**

ಸಮಾರಂಭಕ್ಕೆ ಮಂತ್ರಿಗಳು ಬಂದಾಗ ಬೆಳಂದೂರು ಗ್ರಾಮದ ಹರಿಜನರು ಕಾವಡಿ ಸ. ನಂ. ೮೪ ರಲ್ಲಿ ಜಮೀನಿಗೆ ಅರ್ಜಿ ಸಲ್ಲಿಸಿದರು. ಅರ್ಜಿ ಸ್ವೀಕರಿಸಿದ ಮಂತ್ರಿಗಳು ಆದಷ್ಟು ಬೇಗ ಅರ್ಜಿ ಪರಿಶೀಲಿಸಿ ಜಮೀನು ಮಂಜೂರು ಮಾಡಿಸುವುದಾಗಿ ಹೇಳಿ, "ನಾನೂ ಇದೇ ಗ್ರಾಮದವನೇ. ನಿಮ್ಮ ಕೆಲಸ ಮಾಡಿಕೊಡದಿದ್ದರೆ ರಟ್ಟೆ ಹಿಡಿದು ಕೇಳಿ" ಎಂದರು. ಆಗ ಕಾವಡಿಯ ಹರಿಜನನೊಬ್ಬ, "ಈ ಮಾತನ್ನು ನೀವು ಎಷ್ಟನೇ ಸಲ ಹೇಳ್ತಿದ್ದೀರಿ" ಎಂದನಂತೆ. ತಬ್ಬಿಬ್ಬಾದ ಮಂತ್ರಿಗಳು 'ಆಹಾ! ನಾನು ಯಾವ ಕೆಲಸ ನಾನು ಮಾಡಿಕೊಟ್ಟಿಲ್ಲ?' ಎಂದಾಗ, ಹೋಳಿಕೊಪ್ಪದಲ್ಲಿ ಮಂತ್ರಿಗಳಿಗೆ ಸನ್ಮಾನ ನಡೆದಾಗ ಇದೇ [illegible] ಗ್ರಾಮದ ಸ. ನಂ. ೧೯ ರಲ್ಲಿ ಜಮೀನು ಕೋರಿ ಅರ್ಜಿ ಸಲ್ಲಿಸಿದ್ದು, "ಆದಾಗಿ ಮೂರು ವರ್ಷವಾದರೂ ಆ ಅರ್ಜಿ ಏನಾಯಿತೋ ಗೊತ್ತಿಲ್ಲ. ನಮಗಿನ್ನೂ ಅದಾಗೂ ಆದೇ ರೀತಿ ಆಗದಂತೆ ಮಾಡಿ" ಎಂದು ಹರಿಜನರ ಮನವಿ.

ಪಟ್ಟಾವಲ್ಲಿಯೇ ಜಮೀನನ್ನು ಮಂಜೂರು ಮಾಡಿಸಿ, ಸಾಗುವಳಿ ಚೀಟಿಯನ್ನು ತಾವೇ ಖುದ್ದಾಗಿ ಕೊಡುವುದಾಗಿ ಮಂತ್ರಿಗಳು ಭರವಸೆ ಕೊಟ್ಟು, ಹೋದರು. [illegible] ಹರಿಜನ ಕೇರಿಯ ಯುವಕರು "[illegible]"ಗೆ ತಿಳಿಸಿದ್ದಾರೆ. ಈ ಕಾರ್ಯಕ್ರಮ ದಲಿತ ಸಂಘರ್ಷ ಸಮಿತಿಯ ಮುಂದಾಳತ್ವದಲ್ಲಿ ನಡೆಯಿತೆಂದೂ ತಿಳಿಸಿದ್ದಾರೆ.

# ಗ್ರಾಮೀಣ ಮಹಿಳೆಯರ ಸಂಘಟನೆ : ಲೇಖಕಿಯ ವಿವರಣೆ

(೨ನೇ ಪುಟದಿಂದ)

"ಶ್ರೀಮಂತ ಮಹಿಳೆಯರ ಕ್ಲಬ್‌ಗಳ ಕಡೆ ಏಕೆ ಗಮನ ಹರಿದಿಲ್ಲ?" ಎನ್ನುತ್ತಾರೆ. ನನ್ನ ಲೇಖನ ಗ್ರಾಮೀಣ ಮಹಿಳೆಯರ ಸಂಘಟನೆ ಕುರಿತದ್ದು. ಆದ್ದರಿಂದ ಈ ವಿಚಾರ ನನ್ನ ಲೇಖನಕ್ಕೆ ಹೊರತಾದದ್ದಾಗುತ್ತೆ.

"ಈಗಿನ ಕಾಲದಲ್ಲಿ ನಡೆವ ಎಷ್ಟೋ ಅತ್ಯಾಚಾರಗಳಿಗೆ ಗೊಡ್ಡು ಸಂಪ್ರದಾಯ ದೂರವಾಗದಿರುವುದು ಮುಖ್ಯಕಾರಣ" ಎನ್ನುತ್ತಾರೆ ತಾರಾ. ಆದರೆ ಫ್ಯಾಷನ್‌ನ ಗಂಧ ಅರಿಯದ, ಗೊಡ್ಡು ಸಂಪ್ರದಾಯವನ್ನು ದೂರ ಮಾಡದ ಹಳ್ಳಿಗಳಲ್ಲಿ ನಡೆಯುತ್ತಿರುವ ಅತ್ಯಾಚಾರಗಳಿಗೆ ಯಾವುದನ್ನು ಹೊಣೆ ಎನ್ನುವುದು?

'ಸ್ವೇಚ್ಛಾಚಾರವೇ ಸ್ವಾತಂತ್ರ್ಯ ಎಂದು ಕೊಂಡ ಮಹಿಳೆಯರಿದ್ದಾರೆ ; ಮನೆ ಬಿಟ್ಟು ಹೊರಗೆ ಹೋದರೆ ಸ್ವಾತಂತ್ರ್ಯ ಎಂದುಕೊಳ್ಳಬೇಕಾಗಿಲ್ಲ, ಆತ್ಮ ವಿಶ್ವಾಸವಿದ್ದರೆ ಹೊರಗೆ ತಿರುಗಬಹುದು....' ಎಂದಿದ್ದಾರೆ. ಆದರೆ, ನಿಜವಾಗಿಯೂ ಪ್ರಗತಿಪರ ಧೋರಣೆಯುಳ್ಳ, ಕಳಕಳಿಯ ಮನೋಭಾವದ, ವಿದ್ಯಾವಂತ, ವೈಚಾರಿಕತೆ ಹೊಂದಿರುವ ಮಹಿಳೆ ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವೆಂದು ತಿಳಿಯಲಾರರು. ಒಂದು ವೇಳೆ ಹಾಗೆ ತಿಳಿಯುವವರು ಇರುತ್ತಾರೆಂದುಕೊಂಡರೂ ಅದಕ್ಕಾಗಿ ಸ್ವಾತಂತ್ರ್ಯವೇ ಬೇಡ ಎನ್ನುವುದೆ?

ಆತ್ಮವಿಶ್ವಾಸವಿಲ್ಲದವರು ಮನೆ ಹೊರಗೆ ಮಾಡೋ ಕೆಟ್ಟ ಕೆಲಸಗಳನ್ನ ಮನೆ ಒಳಗೆ ಇದ್ದೂ ಮಾಡಬಹುದಲ್ಲವೆ? ಇದಕ್ಕೆ ಒಳಗೆ-ಹೊರಗೆ ಎಂಬ ಭೇದವಿಲ್ಲ. ಹೊರಗೆ ತಿರುಗಾಡಿದವರೆಲ್ಲ ಕೆಟ್ಟು ಹೋಗುತ್ತಾರೆಂಬ ಅರ್ಥ ಸಲ್ಲನು.

ಹಳ್ಳಿಯ ಮಹಿಳೆ ಒಂದು ಸಂಘದ ಸದಸ್ಯೆಯಾಗಲು ತನ್ನ ಮನೆಯ 'ಗಂಡು ಶ್ರೇಷ್ಠ'ರ ಒಪ್ಪಿಗೆ ತೆಗೆದುಕೊಳ್ಳಬೇಕು. ಪ್ರತಿ ತಿಂಗಳು ನಡೆಯುವ ಸಭೆಗೂ ಅವರನ್ನು ಕೇಳಿ ಬರಬೇಕು. ಇಷ್ಟು ಸಣ್ಣ ವಿಷಯಕ್ಕೂ ಆಕೆಗೆ ಸ್ವಾತಂತ್ರ್ಯ ಇಲ್ಲವಲ್ಲ?

'ಸ್ತ್ರೀಯರೆಲ್ಲರೂ ಮನಸ್ಸು ಮಾಡಿದರೆ ಗಂಡಸರನ್ನು ಒಪ್ಪಿಸುವುದೇನೂ ಕಷ್ಟವಿಲ್ಲ' ಎನ್ನುತ್ತಾರೆ. ಯಾರನ್ನು, ಯಾರು, ಯಾಕೆ, ಯಾವುದಕ್ಕೆ, ಯಾರಿಗಾಗಿ ಒಪ್ಪಿಸಬೇಕು!? ಸ್ವಾತಂತ್ರ್ಯವಾಗಲಿ ಸಮಾನತೆಯಾಗಲಿ, ಬೇಡಿ ಪಡೆಯುವಂತಹುದಲ್ಲ. ಅದು ಮನುಷ್ಯರಾದವರಿಗೆಲ್ಲ ಸಹಜವಾದ ಪ್ರವೃತ್ತಿ. ಆದರೆ ಈಗ ಅದನ್ನು ಹೋರಾಡಿ ಪಡೆಯಬೇಕಾಗಿದೆ.

'ನೋವಿಗೆ ಓಗೊಡುವ ವಿಶಾಲ ಮನೋಭಾವ ನಮ್ಮದಾಗಬೇಕು....' ; 'ಒಂದು ಗಂಟೆ ಕಾಲ ಹೊರಗಿನವರೊಡನೆ ಕಲೆತು ಮಾತಾಡಿ, ಸಾಕು ....' ಎನ್ನುತ್ತಾರೆ, ತಾರಾ. ಸರಳತೆ, ಸಜ್ಜನಿಕೆ, ತಾಳ್ಮೆ, ಪ್ರಾಮಾಣಿಕತೆ, ಒಳ್ಳೆತನ ಇನ್ನೆಲ್ಲ ಓರ್ವ ಸಂಘಟನಾಕಾರರಿಗೆ ಇರಲೇ ಬೇಕಾದ ಅವಶ್ಯಕ ಗುಣಗಳು. ಇದನ್ನು ಹೊಸದಾಗಿ ಹೇಳಬೇಕಾದ ಅಗತ್ಯವಿಲ್ಲ. ಸಂಘಟನಕಾರರನ್ನು ಹಳ್ಳಿಗರು ಮೈಯೆಲ್ಲ ಕಣ್ಣಾಗಿ ಪರೀಕ್ಷಿಸುತ್ತಾರೆ. ಅವರು ಅವಿವಾಹಿತರಾಗಿದ್ದರೆ "ಇವಳಿಗ್ಯಾಕೆ ಇದೆಲ್ಲ?.... ಮದುವೆ ಮಾಡಿಕೊಂಡು ಗಂಭೀರವಾಗಿರಬಾರದೆ?" ಎನ್ನುತ್ತಾರೆ. ವಿವಾಹಿತೆಯಾಗಿದ್ದರೆ "ಸಂಸಾರವನ್ನು ಬಿಟ್ಟು ಇನ್ನೆಲ್ಲ ಗಂಡಸರ ಉಸಾಬರಿ ಈಕೆಗೆ ಯಾಕೆ?" ಎಂಬ ಕುಹಕ ನುಡಿಗಳನ್ನಾಡುತ್ತಾರೆ.

ಒಂದು ಗಂಟೆಗಿಂತಲೂ ಹೆಚ್ಚಾಗಿ ನಾನು ನನ್ನ ಹಳ್ಳಿ ಮಹಿಳೆಯರ ಜೊತೆ ಇರುತ್ತೇನೆ. ಆದರೂ ಅವರಲ್ಲಿನ ಬದಲಾವಣೆ ಏನಿದ್ದರೂ ಬಾಹ್ಯ ಆಚರಣೆಗಳಲ್ಲಿ ಮಾತ್ರ. ಆಂತರಿಕವಾಗಿ ಅವರಿನ್ನೂ ಪುರುಷ ಪ್ರಧಾನ ಕಟ್ಟಳೆಗಳಲ್ಲೇ ಬಂಧಿತರು.

"ಸುತ್ತಮುತ್ತಲಿನವರಿಗೆ ಸಂತೋಷವಾಗುವಂತೆ ಬದುಕೋದು.... ತನ್ನ ಮಕ್ಕಳನ್ನು ಉತ್ತಮ ಸಂಸ್ಕಾರದಲ್ಲಿ ನಡೆಸುವಲ್ಲಿ ಸಹಕರಿಸಿದರೆ ಇದೇ ಸ್ತ್ರೀ ಸಂಘಟನೆಯಲ್ಲವೆ?" ಎನ್ನುತ್ತಾರೆ ತಾರಾ. ನಮ್ಮ ಸುತ್ತಮುತ್ತಲಿನವರಿಗೆ ಸಂತೋಷವಾಗುವಂತೆ, ತೊಂದರೆ ಕೊಡದಂತೆ ಬದುಕುವುದು ಮನುಷ್ಯ ಸಹಜಧರ್ಮ; ತಮ್ಮ ತಮ್ಮ ಮಕ್ಕಳನ್ನು ಉತ್ತಮವಾಗಿ ಸಾಕೋದು ಅವರ ಕರ್ತವ್ಯ. ಜೀವನದಲ್ಲಿ ಇವುಗಳಿಗೂ ಸಂಘಟನೆಗೂ ಹೋಲಿಕೆ ಮಾಡುವುದು ಸಮಂಜಸವಲ್ಲ. ಅಲ್ಲದೆ ಇವೆಲ್ಲ ಹೆಂಗಸರದು ಮಾತ್ರ ಕೆಲಸವೇನು?

ಈ ರೀತಿಯ ಪ್ರತಿಕ್ರಿಯೆ "ಲೇಖಕಿಯ ಮನಸ್ಸನ್ನು ನೋವು ಮಾಡುವುದಕ್ಕಲ್ಲ" ಎಂದಿದ್ದಾರೆ ತಾರಾ. ಇಲ್ಲಿ ನೋವು-ನಲಿವಿನ ಪ್ರಶ್ನೆಯೇ ಇಲ್ಲ. ವಿಚಾರಗಳ ವಿನಿಮಯ, ಅದಕ್ಕಿಂತಲೂ ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಸ್ಥಿತಿಗತಿಗಳ – ಆಗುಹೋಗುಗಳ ಬಗ್ಗೆ ನಿಜವಾಗಿ ನಾವು ಮಾಡಬೇಕಾ...

## ಓದುಗರ ಪತ್ರಗಳು

### ಸಗೋತ್ರ ವಿವಾಹ : 'ಉತ್ತರ ಬಂದಿದೆಯೆ?'

['ಸಗೋತ್ರ ವಿವಾಹ ಪಾಪವೆ?' ಎಂಬ ನಮ್ಮ ಬಹಿರಂಗ ಪತ್ರದಲ್ಲಿ ಪ್ರಸ್ತಾಪಿಸಿದ್ದ ಗೆಳೆಯನಿಂದ ಪತ್ರ ಬಂದಿದೆ. ಅವನ ಹೆಸರನ್ನು ಮಾತ್ರ ಪ್ರಕಟಿಸಿಲ್ಲ.—ಸಂ.]

....ನನ್ನ ವಿಷಯವನ್ನು ಪ್ರಕಟಿಸಿದ್ದೀಯ. ಬಹಳ ಚೆನ್ನಾಗಿದೆ. ಅಭಿನಂದನೆಗಳು. ಉತ್ತರ ಬಂದಿದೆಯೋ ಹೇಗೆ? ಇದು ಸಾಮಾನ್ಯನಾಗಿ ನನ್ನೊಬ್ಬನ ಸಮಸ್ಯೆ ಅಲ್ಲ. ಹಳ್ಳಿಯ ಮಧ್ಯಮ ವರ್ಗದ, ಅದರಲ್ಲೂ ಬಹಳ ಧರ್ಮಾಂಧತೆ ಹೊಂದಿರುವವರ ಒಂದು ಸಮಸ್ಯೆ........

—........

ದ ಏನು? ಎಂಬುದನ್ನು ಸಂಕುಚಿತ ಆವರಣ ಇಲ್ಲದ ಪ್ರಗತಿಪರ ವಿದ್ಯಾವಂತ ಮಹಿಳೆಯರೆಲ್ಲರೂ ಯೋಚಿಸಬೇಕಾಗಿದೆ.

ಮುಕ್ತಾಯದ ಅಂಶ. ಸಾವಿರಾರು ವರ್ಷಗಳಿಂದ ಆಳವಾಗಿ ಬೇರು ಬಿಟ್ಟಿರುವ ಗ್ರಾಮೀಣ ಸಾಂಪ್ರದಾಯಿಕ ಕಟ್ಟುಪಾಡುಗಳು ಒಮ್ಮೆಗೇ ಕೊಚ್ಚಿ ಹೋಗಬೇಕೆಂಬ ಆತುರದ ಪ್ರವೃತ್ತಿ ನನಗಿಲ್ಲ. ಆದರೆ, ಬದಲಾಗುವುದೇ ಇಲ್ಲ ಎಂಬ ನಿರಾಶಾಭಾವನೆಯೂ ನನಗಿಲ್ಲ. ಆದರೆ ಗ್ರಾಮೀಣ ಮಹಿಳೆಯರ ಅರ್ಹವಂತಿಕೆಯ ಬದುಕನ್ನು ನಡೆಸುವಂತೆ ಹೇಳುವ ಸಂಘ ವಿಶಾಲ ಮನೋಭಾವದ ಸಂಘಟನಕಾರರ ಪ್ರಯತ್ನಗಳು ಮಾತ್ರ ಸತತವಾಗಿ ಆಗುತ್ತಲೇ ಇರಬೇಕು.

ಹೆಚ್.ಎಸ್.ಎಸ್. ರತ್ನ.

## ಗೋಕಾಕ್ ವರದಿ ಪೂರ್ಣ ಜಾರಿ ಅಸಾಧ್ಯ

ಗೋಕಾಕ್ ವರದಿ ಪೂರ್ಣ ಜಾರಿಗೆ ಈಗ ನಡೆಯುತ್ತಿರುವ ಚಳುವಳಿ ದುರದೃಷ್ಟಕರವಾದದ್ದು. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಪ್ರೌಢ ಶಾಲೆಯಲ್ಲಿ ಕನ್ನಡವನ್ನು ೧೦೦ ಅಂಕದಲ್ಲಿ ಜಾರಿಗೆ ತಂದಿದ್ದಾರೆ. ಅದನ್ನು ೧೫೦ ಅಂಕದಲ್ಲಿ ಜಾರಿಗೆ ತಂದರೆ ಬೇರೆ ರಾಜ್ಯದಿಂದ ಬಂದು ನೆಲೆಸಿದ ವಿದ್ಯಾರ್ಥಿಗಳು ಮುಂದೆ ಓದುವುದು ತುಂಬಾ ಕಠಿಣಕರವಾದದ್ದು. ಅಲ್ಲದೆ ನಾಡಿನ ಜನತೆ ಪೂರ್ಣ ಕನ್ನಡ ಒಂದೇ ಕಲಿತರೆ ಯಾವ ಪ್ರಯೋಜನವೂ ಆಗಲಾರದು ಮತ್ತು ಇನ್ನುಳಿದ ಇಂಗ್ಲಿಷ್, ಹಿಂದಿ ಭಾಷೆ ಕಲಿಯುವವರು ಯಾರು? ಕರ್ನಾಟಕ ಜನತೆ ಬೇರೆ ರಾಜ್ಯಕ್ಕೆ ಹೋಗಿ ಅಲ್ಲಿ ನೆಲೆಸಿದ್ದರೆ ಆ ರಾಜ್ಯದಲ್ಲಿ ಇದೇ ಪರಿಸ್ಥಿತಿಯಾಗಿದ್ದರೆ ತಮ್ಮ ಪಾಡೇನೆಂಬುದನ್ನು ಕೇಳಿ ತಿಳಿದುಕೊಳ್ಳಬೇಕಾದ ಒಂದು ಮುಖ್ಯ ಸಂಗತಿ.

ಚಿಪ್ರನಹಳ್ಳಿ ಪುಂಡರೀಕ ಸಿ. ಎಂ.

### ಸೈಕಲ್ ಪಂದ್ಯರಿಗಳ ಧರಣಿಯಲ್ಲಿ ಭಾಗವಹಿಸಲು ಕರೆ

ಕರ್ನಾಟಕ ರಾಜ್ಯ ಸೈಕಲ್ ಪಂದ್ಯರಿ ಸದಸ್ಯರ ಸಂಘವು ದಿನಾಂಕ ೧೫-೬-೮೧ ರಿಂದು ಸಾಂಕೇತಿಕ ಧರಣಿ ಮುಷ್ಕರ ಉಪವಾಸ ಸತ್ಯಾಗ್ರಹವನ್ನು ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ನಡೆಸಲು ನಿರ್ಧರಿಸಿರುವುದರಿಂದ, ಶೃಂಗೇರಿ ತಾಲ್ಲೂಕಿನ ಹಾಗೂ ಇತರೆ ತಾಲ್ಲೂಕುಗಳ ಎಲ್ಲಾ ಸದಸ್ಯರೂ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ವೈ.ಜಿ. ರವಿಶಂಕರ್.
ಸೈಕಲ್ ಪಂದ್ಯರಿ ಅಧ್ಯಕ್ಷ, ಶೃಂಗೇರಿ ತಾಲ್ಲೂಕ್

ಓದುಗರಲ್ಲಿ—

ಸರಿಯಾದ ಹೆಸರು-ವಿಳಾಸ, ಸಹಿಗಳಿಲ್ಲದ ಬಹಳಷ್ಟು ಪತ್ರಗಳು ಓದುಗರ ವಿಭಾಗಕ್ಕಾಗಿ ಬರುತ್ತಿವೆ. ಆದರೆ, ಅವುಗಳಲ್ಲಿರುವ ವಿಷಯಗಳು, ದೂರುಗಳು, ಆಪಾದನೆಗಳು ಮಹತ್ತಾದುವು ಎಷ್ಟೇ ಸತ್ಯವಾಗಿದ್ದರೂ ವಿಳಾಸ ಮತ್ತು ಸಹಿಗಳಿಲ್ಲದೆ ಪ್ರಕಟಿಸಲು ಸಾಧ್ಯವಿಲ್ಲ. 'ಹೆಸರು ಪ್ರಕಟಿಸಬೇಡಿ' ಎಂದರೆ ಹಾಗೇ ಮಾಡುತ್ತೇವೆ. ಆದರೆ ಪತ್ರದಲ್ಲಿ ಮಾತ್ರ ಪೂರ್ಣವಿವರ ಇರಲೇಬೇಕು. ಈಗಾಗಲೇ ಪತ್ರ ಬರೆದಿರುವವರೂ (ಪ್ರಕಟವಾಗಿಲ್ಲದ್ದು) ಇದನ್ನು ಗಮನಿಸಬಹುದು.

—ಸಂಪಾದಕ.

ತಿದ್ದುಪಡಿ :

೨ನೇ ಪುಟದ ೩ ನೇ ಕಾಲಂನಲ್ಲಿ 'ಕೂಲಿಯಲ್ಲಿ ಜೀವನ ಸಾಗಿಸುವ ಮಹಿಳೆಯರು' ಎಂದೂ, ೪ನೇ ಕಾಲಂನಲ್ಲಿ 'ಕ್ರಿಯಾಶೀಲ ಗ್ರಾಮೀಣ ಮಹಿಳಾ ಸಂಘಟನೆ ನಮಗೆ ಬೇಕು' ಎಂದೂ ತಿದ್ದಿಕೊಳ್ಳಿ.

—ಸಂ.

## ಭಾಷಾ ಅಲ್ಪಸಂಖ್ಯಾತರ ಪರವಾಗಿ....

— ಗಂಗಾಧರಮೂರ್ತಿ.

ಇದೊಂದು ಗೋಕಾಕ್ ವರದಿಯ ವಿರುದ್ಧ ಎತ್ತಿದ ಧ್ವನಿಯಲ್ಲ, ಗೋಕಾಕ್ ವರದಿಯ ಅನುಷ್ಠಾನಕ್ಕೆ ಒತ್ತಾಯಿಸುತ್ತಿರುವವರ ಮಾರ್ಗದ ಹಿಂದಿನ ಸಣ್ಣ ಅಸಮಾಧಾನ ಅಷ್ಟೆ.

ಕರ್ನಾಟಕದ ಜನತೆ ತನ್ನ ಮಾತೃಭಾಷೆಯ ಬಗ್ಗೆ ಬಹಳ ನಿಧಾನವಾಗಿ ಎಚ್ಚೆತ್ತುಕೊಂಡಿದೆ ಎಂಬುದನ್ನು ಹೇಳಬೇಕಾಗಿದೆ. ಮಾತೃಭಾಷೆಗೆ ಪ್ರಥಮ ಸ್ಥಾನ ನೀಡಬೇಕಾಗಿರುವ ಅಗತ್ಯದ ಬಗ್ಗೆ ಅವರು ತಡವಾಗಿ, ಆದರೆ ಅಗತ್ಯಕ್ಕಿಂತ ಹೆಚ್ಚಿನ ಬಲ ಪ್ರದರ್ಶಿಸುತ್ತಾ ಚಳುವಳಿ ನಡೆಸುತ್ತಿರುವುದು ಶೋಚನೀಯವೆಂದು ಹೇಳಲೇಬೇಕಾಗಿದೆ.

ದಿನಾಂಕ: ೨-೫-೮೧ ರಂದು ಕೊಪ್ಪದಲ್ಲಿ ನಡೆದ ಗೋಕಾಕ್ ವರದಿಯ ಪರವಾದ ಚಳುವಳಿಯ ಸಭೆಯಲ್ಲಿ ಮಾತನಾಡಿದ ಶ್ರೀ ಮಲ್ಲಿಕಾರ್ಜುನ ಭಟ್ಟರು ವರದಿಯನ್ನು ಪೂರ್ಣವಾಗಿ ಕೂಡಲೇ ಜಾರಿ ಮಾಡಬೇಕೆಂದು ಹೇಳುವ ಭರದಲ್ಲಿ ಅದರಿಂದ ಉದ್ಭವಿಸುವ ವ್ಯಾವಹಾರಿಕ ತೊಂದರೆಗಳನ್ನು, ಅಂಕಿ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಕಡೆಗಣಿಸಿ ಬದಿಗೊತ್ತಿದರು. ಚಳುವಳಿಯ ಪರವಾದ ಈ ವಾದದ ದೌರ್ಬಲ್ಯಗಳನ್ನು ಎತ್ತಿತೋರಿಸುವುದೇ ನನ್ನ ಮುಖ್ಯ ಉದ್ದೇಶ.

ಗೋಕಾಕ್ ಸಮಿತಿಯನ್ನು ನೇಮಕ ಮಾಡಿದ್ದರ ಮುಖ್ಯ ಉದ್ದೇಶ ಕನ್ನಡವನ್ನು ಪ್ರಥಮ ಭಾಷೆಯ ಸ್ಥಾನಕ್ಕೆ ಏರಿಸುವುದರ ಸಾಧ್ಯತೆಗಳನ್ನು ಪರಿಶೀಲಿಸುವುದು ಹಾಗೂ ಕರ್ನಾಟಕದ ಎಲ್ಲರೂ ಕನ್ನಡವನ್ನು ಕಲಿಯುವಂತೆ ಮಾಡುವುದು. ಈಗ ಸರ್ಕಾರದ ತೀರ್ಮಾನದಂತೆ ಕನ್ನಡ ಪ್ರಥಮ ಭಾಷೆಯಾಗಿದೆ; ಅದನ್ನು ಕಡ್ಡಾಯ ಮಾಡಲಾಗಿದೆ. ಹಾಗಿದ್ದ ಮೇಲೆ ಯಾಕೆ ಇಷ್ಟೆಲ್ಲಾ ಗೊಂದಲ-ಗಲಾಟೆ? ಕನ್ನಡ ಏಕೈಕ ಕಡ್ಡಾಯ ಪ್ರಥಮ ಭಾಷೆಯಾಗಬೇಕೆಂದು ಒತ್ತಾಯಿಸುವುದರಿಂದ ಭಾಷಾ ಅಲ್ಪಸಂಖ್ಯಾತರಿಗೆ ತುಂಬಾ ತೊಂದರೆಯಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಭಟ್ಟರು ಈ ಆಕ್ಷೇಪಣೆಯನ್ನು, ಸಮಸ್ಯೆಯ ಗಾಂಭೀರ್ಯಕ್ಕೆ ಸ್ವಲ್ಪವೂ ಗಮನಕೊಡದೇ ಕಡೆಗಣಿಸಿದ್ದಾರೆ. ಇದಕ್ಕೆ ಅವರ ಟೀಕೆ ಸಿದ್ಧವಾದೊಂದು ಉತ್ತರವಿದೆ. (ಇದು ಎಲ್ಲಾ ಗೋಕಾಕ್ ವರದಿಪರರ ಹಾಡೂ ಆಗಿದೆ.) ಶೇಕಡಾ ೯೦ರಷ್ಟು ಜನರಿಗೆ ಉಪಯುಕ್ತವಾಗುವುದಾದರೆ ಉಳಿದ ಶೇಕಡಾ ೨ರಷ್ಟು ಜನ ತೊಂದರೆ ಅನುಭವಿಸಲು ತಯಾರಿರಬೇಕು, ಅಲ್ಲದೆ ಬಹುಮತದ ಬಲಿ ಪೀಠಕ್ಕೆ ತಮ್ಮ ಹಕ್ಕುಗಳನ್ನು ಒಪ್ಪಿಸಲು ಯಾವಾಗಲೂ ಸಿದ್ಧರಿರಬೇಕು ಎಂಬುದೇ ಆ ವಾದ.

ಭಾಷೆಯ ಪ್ರಶ್ನೆ ಹುಡುಗನೊಬ್ಬನಿಗೆ ಹುಡುಗನ ಸ್ಪರ್ಶದಷ್ಟೇ ಸೂಕ್ಷ್ಮವಾದದ್ದು. ಅದು ವ್ಯಕ್ತಿಗಳಲ್ಲಿ ಭಾವನೆಗಳನ್ನು ಹುಟ್ಟಿಸುತ್ತದೆ. ಗೊಂದಲಗಳನ್ನು ಸೃಷ್ಟಿಸುತ್ತದೆ. ಬೇರೆ ರಾಜ್ಯಗಳೂ ಇದೇ ನೀತಿಯನ್ನು ಅನುಸರಿಸಿದಾಗ ಏಕತೆಯ ಸಮಸ್ಯೆಗೆ ಒಂದು ಧಕ್ಕೆ ಬರುತ್ತದೆ. ಆಗ ಭಾರತದ ಸಾರ್ವಭೌಮತ್ವವೇ ಅಪಾಯಕ್ಕೀಡಾಗುತ್ತದೆ.

(ಮುಂದಿನ ಸಂಚಿಕೆ ನೋಡಿ.)

# ಗ್ರಾಮೀಣ ಮಹಿಳೆಯರ ಸಂಘಟನೆ

## ತಾರಾಪ್ರಸಾದ್‌ರ ಪತ್ರಕ್ಕೆ ಲೇಖಕಿಯ ವಿವರಣೆ

"ಗ್ರಾಮೀಣ ಮಹಿಳಾ ಸಂಘಟನೆ ..." ನನ್ನ ಲೇಖನದ ಬಗ್ಗೆ ೨೫-೪-೮೨ ರ 'ದೀವಟಿಗೆ'ಯಲ್ಲಿ ಶ್ರೀಮತಿ ತಾರಾ ಪ್ರಸಾದ್‌ರವರು "ಸ್ತ್ರೀ ರಾಷ್ಟ್ರದ ಆಧಾರಶಕ್ತಿ" ಎಂಬ ಶೀರ್ಷಿಕೆಯಡಿಯಲ್ಲಿ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ.

"ಸ್ತ್ರೀ ರಾಷ್ಟ್ರದ ಆಧಾರ ಶಕ್ತಿ, "ಹೆಣ್ಣು ಸಂಸಾರದ ಕಣ್ಣು", "ಮಾತೃ ದೇವೋಭವ" ಇತ್ಯಾದಿ ಬಾಯಿ ಚಪ್ಪರಿಸುವ, ನಾವೆಲ್ಲ ಉಬ್ಬಿಹೋಗುವ ಹಲವಾರು ವಾಕ್ಯಗಳು ಪ್ರಾಚೀನ ಪುರಾಣ ಗ್ರಂಥಗಳಲ್ಲಿ ಹಾಗೂ ಇಂದಿನ ಹಲವಾರು ಗ್ರಂಥಗಳಲ್ಲಿ ಹೇರಳವಾಗಿ ದೊರಕುತ್ತವೆ. ವಿದ್ಯೆಗೆ, ಶಕ್ತಿಗೆ, ಐಶ್ವರ್ಯಕ್ಕೆ ಹೆಣ್ಣುಗಳನ್ನು ಪುರಾಣಗಳು ಒಡತಿಯರನ್ನಾಗಿ ಮಾಡಿವೆ! ಆದರೆ ವಾಸ್ತವ ಜಗತ್ತಿನಲ್ಲಿ ಇವು ಯಾವೂ ಅನುಷ್ಠಾನದಲ್ಲಿ ಇಲ್ಲ. ಇಂದಿಗೂ ಹೆಣ್ಣು ಮಕ್ಕಳಿಗಿಂತ ಗಂಡುಮಕ್ಕಳೆಂದರೆ ಬಾಯಿಬಾಯಿ ಬಿಡುವ ಜನರೇ ಹೆಚ್ಚು; ಅವೆಲ್ಲ ಇರಲಿ.

ಶ್ರೀಮತಿ ತಾರಾರವರು ನನ್ನ ಲೇಖನವನ್ನು "೧೯೬೧ ರ ಅನುಭವವನ್ನು ಕುರಿತದ್ದಲ್ಲ, ಎರಡು ದಶಕಗಳ ಹಿಂದಿನದೇ ಇರಬೇಕು" ಎನ್ನುತ್ತಾರೆ. ಆದರೆ ಎರಡು ದಶಕಗಳ ಹಿಂದೆ ಹಳ್ಳಿಗಳಲ್ಲಿನ ಮಹಿಳೆಯರ ಸ್ಥಿತಿ ಹೇಗಿತ್ತೋ ಇಂದಿಗೂ ಹಾಗೆ ಇದೆ; ಇನ್ನು ಎರಡು ದಶಕಗಳಲ್ಲಿ ಬದಲಾಗುತ್ತದೆ ಎಂಬ ಭರವಸೆಯನ್ನೂ ಇಟ್ಟುಕೊಳ್ಳಲಾಗುವುದಿಲ್ಲ. ಬದಲಾವಣೆ ಏನಿದ್ದರೂ ಬಾಹ್ಯ ವಿಚಾರಗಳಲ್ಲಿ ಆಗಿರಬಹುದು; ಆಂತರಿಕವಾಗಿ ಅವರಿನ್ನೂ ಪುರುಷರ 'ಸೂತ್ರದ ಗೊಂಬೆ'ಗಳೆ!

ನಾನು ಹಳ್ಳಿ ಪ್ರದೇಶದಲ್ಲಿ ಹುಟ್ಟಿ-ಬೆಳೆದು ಈಗಲೂ ಹಳ್ಳಿಯಲ್ಲೇ ಇದ್ದೇನೆ. ಹೀಗಾಗಿ ಮಹಿಳೆಯರ ಬಗೆಗಿನ ಸಮಸ್ಯೆಗಳು, ಆಗು ಹೋಗುಗಳ ಅರಿವು ಕೇವಲ ಒಂದೆರಡು ವರ್ಷದಿಂದ ಬಂದದ್ದಲ್ಲ.

"ಶಿಕ್ಷಣವೇ ಸ್ತ್ರೀ ಸಂಘಟನೆಗೆ ಮುಖ್ಯ" ಎಂಬುದರ ಬಗ್ಗೆ ಶ್ರೀಮತಿ ತಾರಾರವರು ಆಕ್ಷೇಪ ಮಾಡಿದ್ದಾರೆ. ಮಹಿಳೆಯರಿಗೆ ಶಿಕ್ಷಣ ನೀಡಿ ಎಲ್ಲ ರೀತಿಯ ಸಂಘಟನೆಯನ್ನು ಸಾಧಿಸಬಹುದೆಂಬ ಭ್ರಮೆ ನನಗಿಲ್ಲ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಇದನ್ನು ನಿರೀಕ್ಷಿಸುವಂತೆಯೂ ಇಲ್ಲ. ವಿದ್ಯಾವಂತರೆಲ್ಲರೂ ವಿಚಾರವಂತರೂ, ಪ್ರಗತಿಪರಧೋರಣೆಯುಳ್ಳವರೂ ಆಗಲಾರರು. ವಿದ್ಯೆಗೂ ವೈಚಾರಿಕತೆಗೂ-ಪ್ರಗತಿಗೂ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲವೆಂಬುದನ್ನು ಇಂದಿನ ವಿದ್ಯಾವಂತರನ್ನು ನೋಡಿ ತಿಳಿದುಕೊಳ್ಳಬಹುದು!

ಶಿಕ್ಷಣದಲ್ಲಿನ ಓದು-ಬರಹ ಜ್ಞಾನಾರ್ಜನೆಯ ಸಾಧನವಾಗಿದೆ. ಮನುಷ್ಯನಿಗೆ ಇದು ಅಗತ್ಯವಾಗಿ ಬೇಕಾದ ಒಂದು ಮೂಲಾಂಶ. ಆದರೆ ಈ ಬಗ್ಗೆ ಗ್ರಾಮೀಣ ಜನತೆ ಹೆಚ್ಚಿನ ಗಮನ ಹರಿಸಿಲ್ಲ. ಇನ್ನು ಹೆಣ್ಣಿಗಂತೂ ವಿದ್ಯೆ ಇಲ್ಲದಿದ್ದರೂ ನಡೆದೀತು ಎಂಬ ಮನೋಭಾವ. ಹೆಣ್ಣಿಗೆ ಅಡಿಗೆ,-ಪಾತ್ರೆ ಉಜ್ಜೋದು ಗೊತ್ತಿದ್ದರೆ ಸಾಕು ಎಂಬ ಧೋರಣೆ.

ಇನ್ನು ಉನ್ನತ ವ್ಯಾಸಂಗವಂತೂ ಕನಸಿನ- ಕನ್ನಡಿಯ ಗಂಟೇ ಸರಿ. ಇಂದಿಗೂ ಉನ್ನತ ವಿದ್ಯಾಭ್ಯಾಸವೆಲ್ಲ ವಿದ್ಯಾವಂತ ತಂದೆ-ತಾಯಿಗಳನ್ನು ಪಡೆದ ಪಟ್ಟಣದ ಹೆಣ್ಣುಮಕ್ಕಳಿಗೆ ಮಾತ್ರ. ಹಳ್ಳಿಗಳಲ್ಲಿನ ಹೆಣ್ಣುಮಕ್ಕಳು ಅತ್ಯಂತ ಪ್ರತಿಭಾಶಾಲಿಗಳಾಗಿದ್ದರೂ ಸಂಪ್ರದಾಯದ ಕೋಟೆಯಲ್ಲಿ ಪ್ರತಿಭೆ ಉಸಿರುಕಟ್ಟಿ ಹೋಗುತ್ತಿದೆ. "ಹೆಣ್ಣೆಂದರೆ ಹೆರಿಗೆ-ಹೊರಿಗೆಗೆ" ಎಂಬ ಭಾವನೆ ಹಳ್ಳಿಗಳಲ್ಲಿ ಇದೆ. ಆದಷ್ಟು ಬೇಗ ವಿವಾಹ ಮಾಡಿ ಹೆಣ್ಣಿನ ಭಾರ ಕಳೆದುಕೊಳ್ಳಬೇಕೆಂಬ ಭಾವ ಜವರಿಗಿದೆ. ಈ ಮನೋಭಾವ ಇನ್ನು ಒಂದೆರಡು ದಶಕಗಳಲ್ಲಿ ತೊಲಗಿಹೋಗಬಹುದೆಂಬ ಸೂಚನೆಯೂ ಕಾಣುತ್ತಿಲ್ಲ.

ಆದರೂ ಶಿಕ್ಷಣವು ಸಂಘಟನೆಯ ದಿಕ್ಕಿನಲ್ಲಿ ಒಂದು ಮುಖ್ಯ ಅಂಶ. ಆದರೆ ಅದೇ ಎಲ್ಲವೂ ಅಲ್ಲ, ಅಷ್ಟೆ.

"ಸಂಘಟನೆಯ ಮುಖ್ಯ ಉದ್ದೇಶ ಬಡವ ಬಲ್ಲಿದರೆಂಬ ಭೇದಭಾವ ದೂರಮಾಡೋದು ... ಎಂಬುದನ್ನು ತಿಳಿದಿಲ್ಲವೆ?" ಎನ್ನುತ್ತಾರೆ. ಸಂಘಟನೆಗೆ ಹೊರಟಾಗ ನಾವು ಭೇದ ಭಾವ ಮಾಡುತ್ತ ಹೋದರೆ ನಮಗೆ ಯಾರ ಬೆಂಬಲವೂ ಸಿಗುವುದಿಲ್ಲ. ನನ್ನ ಅಭಿಪ್ರಾಯದಂತೆ ಸಂಘಗಳಿಗೆ ಶ್ರೀಮಂತ ಹಾಗೂ ಮಧ್ಯಮ ವರ್ಗದ ಹೆಣ್ಣುಮಕ್ಕಳು ಬರುತ್ತಾರೆ. ಆದರೆ ಬಡವರ್ಗದವರು ಬರುವುದಿಲ್ಲ. ಇನ್ನು ಬಡವರ್ಗವೆಂದರೆ ಕೂಲಿಯಲ್ಲಿ ಜೀವನ ಸಾಗಿಸುವ ಮಹಿಳೆಯರು ನಮಗೆ ಬೇಕು. ಒಂದು ದಿನ ಅವರು ಕೂಲಿಗೆ ಹೋಗದಿದ್ದರೂ ಅವರ ಹೊಟ್ಟೆಗೆ ತಣ್ಣೀರಿನ ಬಟ್ಟೆ!

ಇಂತಹ ಬಡಮಹಿಳೆಯರಿಗೆ ಗ್ರಾಮೀಣಾಭಿವೃದ್ಧಿ ಅಂಗವಾಗಿ ಕೈ ಕಸಬುಗಳಿಗೆ ಬ್ಯಾಂಕಿನಿಂದ ದೊರೆಯುವ ಆರ್ಥಿಕ ನೆರವಿಗೆ ಮಹಿಳಾ ಸಮಾಜ ಸಹಕರಿಸಬಹುದು. ಈ ರೀತಿಯ ಆರ್ಥಿಕ ನೆರವು, ಸಹಾಯ, ಅನುಕೂಲ ಸಿಗುವವರೆಗೆ ಮಹಿಳಾ ಸಮಾಜ, ಕಾರ್ಯಕರ್ತರು ಎಲ್ಲರೂ ಬೇಕು. ಆನಂತರ ಸಂಘದ ಕಡೆಗೆ ತಿರುಗಿಯೂ ನೋಡುವುದಿಲ್ಲ. ಇದು ನನಗಾಗಿರುವ ಕಹಿ ಅನುಭವ. ನಾನು ನನ್ನ ಹಳ್ಳಿಯಲ್ಲಿ ಇಂದಿಗೂ ಮಹಿಳಾ ಸಮಾಜ ಮತ್ತು ಯುವತಿ ಮಂಡಳಿಗಳೆರಡರ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ.

"....ಮಹಿಳಾ ಸಂಘಟನೆಯನ್ನು ಯಶಸ್ವಿಯಾಗಿ ನಡೆಸಿದ್ದೇವೆ" ಎಂದಿದ್ದಾರೆ. ಹಿಂದಿನದೆಲ್ಲವೂ ಸರಿ ಎಂದು, ಈ ಸಮಾಜ ರೂಪಿಸಿರುವ ಎಲ್ಲ ಕಟ್ಟುಪಾಡುಗಳನ್ನು ವಿರೋಧಿಸದೆ, ತಿರಸ್ಕರಿಸದೆ ಅವರ ಹಿರಿಮೆಯನ್ನು ಹಾಡಿ ಹೊಗಳಲು ಮಾಡುವಂತಹ ಸಂಘಟನೆಗಳಿಗೇನೂ ಕಷ್ಟವಿಲ್ಲ. ಇಂತಹ ಸಂಘಟನೆಗಳಿಗೆ 'ಮಹನೀಯರೂ' ಸಂತೋಷದಿಂದ ಸಹಕರಿಸಿಯಾರು. ಈ ರೀತಿಯಲ್ಲಿ ನೂರಾರು ಮಹಿಳೆಯರನ್ನು ಸುಲಭವಾಗಿ ಸಂಘಟಿಸಬಹುದು. ಆದರೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಆಗಬೇಕಾಗಿರುವುದು ಈ ರೀತಿಯ ಸಂಘಟನೆಗಳಲ್ಲ.

ಶೋಷಣೆಯ ವಿರುದ್ಧ, ಅನೂಚಾನವಾಗಿ ನಡೆದು ಬಂದ ಅರ್ಥಹೀನ ಸಂಪ್ರದಾಯಗಳ ವಿರುದ್ಧ, ಮತ್ತು ಅಸಮಾನತೆಯ ವಿರುದ್ಧ ಬಂಡೇಳಬಲ್ಲ ಪ್ರತಿಭಟಿಸಬಲ್ಲ ಕ್ರಿಯಾಶೀಲ ಗ್ರಾಮೀಣ ಮಹಿಳಾ ಸಂಘಟನೆ.

ಇದಕ್ಕೆ ಸಂಬಂಧಿಸಿದಂತೆ ಒಂದೆರಡು ಸಂದರ್ಭಗಳನ್ನು ನೋಡಿ. ಇತ್ತೀಚೆಗೆ ನಮ್ಮ ಪಕ್ಕದ ಊರಿನಲ್ಲಿ ಒಬ್ಬಳು ೧೩ ವರ್ಷದ ವಿವಾಹಿತ ಬಾಲಕಿ ಅತ್ತೆಯ ಅಮಾನುಷ ಚಿತ್ರಹಿಂಸೆಯ ಕ್ರೌರ್ಯದಿಂದ ತೀರಿಕೊಂಡಳು. ಮತ್ತೊಂದು ಹಳ್ಳಿಯಲ್ಲಿ ಒಬ್ಬ 'ಪುರುಷ ಮಹಾಶಯನು' ಹೆಂಡತಿ ತನ್ನ ಮಾತನ್ನು ಮೀರಿ ಜಾತ್ರೆಗೆ ಹೋದಳೆಂಬ ಸಣ್ಣ ಕಾರಣಕ್ಕಾಗಿ ಅಮಾನುಷ ರೀತಿಯಲ್ಲಿ ಹೊಡೆದು ಹೆಂಡತಿಯ ಮರಣಕ್ಕೆ ಕಾರಣನಾದನು.

ಈ ರೀತಿಯ ಗಂಭೀರ ಸಮಸ್ಯೆಗಳು, ಶೋಷಣೆ, ದುರಂತ ಘಟನೆಗಳ ಕ್ರೌರ್ಯದ ವಿರುದ್ಧ ಒಂದು ಪ್ರತಿಭಟನಾ ಮೆರವಣಿಗೆಯನ್ನು ತೆಗೆಯಬೇಕೆಂದು ನಮ್ಮ ಹಳ್ಳಿಯ ಮಹಿಳಾ ಸಮಾಜದಲ್ಲಿ ಒಂದು ಯೋಜನೆ ಹಾಕಿಕೊಂಡೆವು. ಆದರೆ ಇದಕ್ಕೆ ನಿರಾಶಾದಾಯಕ ಪ್ರತಿಕ್ರಿಯೆ ಕಂಡು ಬಂದಿತು. ಕೆಲವು ಮಹಿಳೆಯರು ನಮ್ಮ ಗಂಡ-ಅತ್ತೆ-ತಂದೆ-ತಾಯಿ, ಅಣ್ಣ ಮುಂತಾದವರು ಒಪ್ಪುವುದಿಲ್ಲ ಎಂದು; ಮತ್ತೆ ಕೆಲವು ಮಹಿಳೆಯರು ತಮ್ಮ ಅಂತಸ್ತಿಗೆ ಕಡಿಮೆಯೆಂದೋ, ಈ ಯೋಜನೆಗೆ ಒಪ್ಪಲಿಲ್ಲ. ಈ ರೀತಿಯ ಸನ್ನಿವೇಶಗಳನ್ನು ಎದುರಿಸುವಾಗ ಸದಸ್ಯರು ಬೆರಳೆಣಿಕೆಗಿಂತ ಬಹಳ ಕಡಿಮೆ ಉಳಿಯುತ್ತಾರೆ!

(ಡಿ.ನೇ ಪುಟಕ್ಕೆ)

# ಕನ್ನಡ ಬೆಳೆಸಲು ಹದಿನಾಲ್ಕಂಶದ ಕಾರ್ಯಕ್ರಮ

ಗೋಕಾಕ ವರದಿ ಬಗ್ಗೆ ನಡೆಯುತ್ತಿರುವ ಚಳವಳಿ ಅದರ ಸ್ಪಷ್ಟಕ್ಕೆ ಮುಂದುವರಿಯುತ್ತಿರುವಾಗ ಕನ್ನಡಿಗನಾದವನು ತನ್ನ ಸ್ಪಷ್ಟಕ್ಕೆ ಈ ಕೆಳಕಂಡವುಗಳನ್ನು ಜಾರಿಗೆ ತರಲಿ. ಇದಕ್ಕೆ ಯಾರ ಅಡ್ಡಿಯೂ ಸಹ ಇರುವುದಿಲ್ಲವಾದ್ದರಿಂದ ಅದು ಕೂಡಲೇ ಜಾರಿಗೆ ಬರಲಿ.

ಪ್ರತಿಯೊಬ್ಬ ಕನ್ನಡಿಗನೂ-

**೧ ಪ್ರತಿದಿನ ತಾನಾಡುವ ಕನ್ನಡ ಭಾಷೆಯಲ್ಲಿನ ಇಂಗ್ಲಿಷ್ ಪದಗಳನ್ನು ಆದಷ್ಟು ಕಮ್ಮಿ ಮಾಡಿ ಮಾತಾಡಲಿ.**

**೨ ತನ್ನ ಮನೆಯ ಮುಂದೆ ಕನ್ನಡದಲ್ಲಿ ತನ್ನ ನಾಮಫಲಕವನ್ನು ತಗಲು ಹಾಕಲಿ**

**೩ ಕನ್ನಡ ಬಲ್ಲವರೊಡನೆ ಪತ್ರ ವ್ಯವಹಾರವನ್ನು ಕನ್ನಡದಲ್ಲೇ ನಡೆಸಲಿ.**

೪ ಪ್ರತಿದಿನ ಕನ್ನಡ ಪತ್ರಿಕೆಯೊಂದನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಲಿ.

**೫ ತಮ್ಮ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗೆ ಸೇರಿಸಲಿ.**

೬ ಕನ್ನಡ ಚಲನಚಿತ್ರಗಳನ್ನು ಅವಹೇಳನ ಮಾಡದೆ ತಪ್ಪದೆ ನೋಡಿ ಪ್ರೋತ್ಸಾಹಿಸಲಿ.

೭ ಕನ್ನಡ ಪುಸ್ತಕಗಳನ್ನು ಎರವಲು ತರದೆ ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಲಿ.

೮ ಸಂಗೀತ ಕಛೇರಿಗಳಲ್ಲಿ ಕನ್ನಡ ನಾಡಿನ ಕಲಾವಿದರಿಗೇ ಆದ್ಯತೆ ಕೊಡಬೇಕೆಂದು ಸಂಘ-ಸಂಸ್ಥೆಗಳಿಗೆ ಒತ್ತಾಯ ತರಲಿ

೯ ಪರಭಾಷೆಯನ್ನಾಡುವ ಸ್ನೇಹಿತರು ಕನ್ನಡ ನಾಡನ್ನು ಮನೆಯನ್ನಾಗಿ ಮಾಡಿಕೊಂಡಿದ್ದಲ್ಲಿ ಕನ್ನಡವನ್ನು ಓದಲು ಬರೆಯಲು ಅವರ ಮನಸ್ಸನ್ನು ಪರಿವರ್ತನೆಗೊಳಿಸಲಿ.

೧೦ ದೈನಂದಿನ ವ್ಯವಹಾರಗಳಲ್ಲಿ ಪರಭಾಷೆಯವರು ನಿಮ್ಮಲ್ಲಿ ಮಾತಾಡಿದಲ್ಲಿ ಹೊರತು ಪರಭಾಷೆಯನ್ನಾಡದೆ ಕನ್ನಡದಲ್ಲೇ ಉತ್ತರಿಸಿ.

೧೧ ನಿಮ್ಮ ವ್ಯಾಪಾರ ವ್ಯವಹಾರವನ್ನು ಆದಷ್ಟು ಕನ್ನಡಿಗರ ಅಂಗಡಿಗಳಲ್ಲೇ ಮೀಸಲಿಡಿ.

೧೨ ಕನ್ನಡದ ಇತಿಹಾಸ ಹಾಗೂ ಅದರ ಸಂಸ್ಕೃತಿಯ ಪರಿಚಯವನ್ನು ಹೆಚ್ಚಿನ ವ್ಯಾಸಂಗ ಮಾಡಿ ತಿಳಿದುಕೊಳ್ಳಿ.

೧೩ ಕನ್ನಡದಲ್ಲೇನಿದೆ ಎನ್ನುವ ತಾತ್ಸಾರ ನಿಲ್ಲಿಸಿ ಕನ್ನಡದ ಬಗ್ಗೆ ಅಭಿಮಾನ ಹೊಂದಿ ಇಂಗ್ಲಿಷ್ ಅನುಕರಣೆಯನ್ನು ತಪ್ಪಿಸಿ.

೧೪ ಕನ್ನಡದ ಬಗ್ಗೆ ಇನ್ನಿತರೆ ತಿಳಿಯದ ವಿಷಯಗಳು ನಿಮಗೆ ತಿಳಿದಿದ್ದಲ್ಲಿ ಅದನ್ನು ಪತ್ರಿಕೆಗಳಿಗೆ ಬರೆದು ಇತರರೊಡನೆ ಹಂಚಿಕೊಳ್ಳಿ.

—ಆರ್ ಶಿವಶಂಕರ್
ಮಾಸ್ತಿಕಟ್ಟೆ, ಮೈಸೂರು
('ಆಂದೋಲನ' ಪತ್ರಿಕೆ ಕೃಪೆ)

# 'ಚತುಷ್ಟಯರ ಕೂಟ': 'ವೃಥಾ ಆರೋಪ'

ಏ. ೧೮ ರ 'ದೀವಟಿಗೆಯಲ್ಲಿ' ಪ್ರಕಟವಾಗಿದ್ದ 'ಕೊಪ್ಪ ಪುರಸಭಾಧ್ಯಕ್ಷರ ವಿರುದ್ಧ ಹಣ ದುರುಪಯೋಗದ ಆರೋಪ' ಎಂಬ ವರದಿಗೆ ಅಧ್ಯಕ್ಷ ಮಹಮದ್ ಸಾದಿಕ್ ರವರು ತೀರ್ಥಹಳ್ಳಿಯ ಒಂದು ದಿನ ಪತ್ರಿಕೆಯೊಂದರಲ್ಲಿ ಏ. ೨೮ ರಂದು ಪ್ರತಿ ಹೇಳಿಕೆ ಕೊಟ್ಟಿದ್ದಾರೆ.

ಅದರಲ್ಲಿ ಅವರು ಪ್ರಸ್ತಾಪಿಸಿರುವಂತೆ, ಯಾವುದೇ "ಚತುಷ್ಟಯರ ಕೂಟ"ವಾಗಲಿ. ಅಥವಾ ಯಾವ ಸದಸ್ಯರೇ ಆಗಲಿ, ಸಾದಿಕ್‌ರವರಿಂದ ಅಧ್ಯಕ್ಷ 'ಕುರ್ಚಿ ಕಸಿಯಲು' ಯಾವುದೇ ರೀತಿ ಪ್ರಯತ್ನ ನಡೆಸುತ್ತಿಲ್ಲ; ಇದೊಂದು ವೃಥಾ ಆಪಾದನೆಯಾಗಿದೆ ಎಂದು ಕೊಪ್ಪ ಪುರಸಭೆಯ ಕೆಲವು ಸದಸ್ಯರು ತಿಳಿಸಿದ್ದಾರೆ. ಈ ಬಗ್ಗೆ ಎಲ್ಲಾ ಮಾಸಿಕ ಸಭೆಗಳಲ್ಲೂ ಸ್ಪಷ್ಟವಾಗಿ ತಿಳಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

"ಅಧ್ಯಕ್ಷರು ತಮ್ಮ ಹೇಳಿಕೆಯಲ್ಲಿಯೇ ತಿಳಿಸಿರುವಂತೆ, ಪುರಸಭೆಯು ಮತ್ತು ಮಹಾ ಜನತೆಯ ಹಿತದೃಷ್ಟಿಯಿಂದ ಯಾವ ಮಹತ್ಕಾರ್ಯವನ್ನೇನೂ ಸಾಧಿಸಿಲ್ಲ. ಎಲ್ಲರೂ ಕೆಲಸ ಮಾಡುವಂತೆಯೇ ಮಾಡಿದ್ದಾರೆ" ಎಂದೂ ಅವರು ತಿಳಿಸಿದ್ದಾರೆ.

["ಅಧ್ಯಕ್ಷರ ವಿರುದ್ಧ ಹಣ ದುರುಪಯೋಗದ ಸುಳ್ಳು ಆರೋಪ ಹೊರಿಸಿ ಸುದ್ದಿ ಪ್ರಕಟಿಸಿರುವುದಾಗಿ" ಆ ಪತ್ರಿಕೆಯಲ್ಲಿ ಬರೆಯಲಾಗಿದೆ. ಆದರೆ ನಾವೇನೂ ಆರೋಪ ಹೊರಿಸಿಲ್ಲ. ಕೆಲವು ಸದಸ್ಯರುಗಳೇ ಆರೋಪ ಹೊರಿಸಿ, ಮಾಸಿಕ ಸಭೆಯಲ್ಲೂ ನಿರ್ಣಯ ಮಾಡಿರುವ ಸುದ್ದಿಯನ್ನಷ್ಟೇ ನಾವು ವರದಿ ಮಾಡಿದ್ದೇವೆ. ಸದಸ್ಯರುಗಳು ಆರೋಪಿಸಿದ್ದೂ, ನಿರ್ಣಯ ಮಂಡಿಸಿ ಅದು ಪಾಸಾದದ್ದೂ ಸುಳ್ಳಲ್ಲವಷ್ಟೆ?

ಇನ್ನೊಂದು ವಿಷಯ ಹೇಳಿದರೆ ತಪ್ಪಾಗಲಾರದು. ಒಂದು ಪತ್ರಿಕೆಯಲ್ಲಿ ಒಂದು ಆರೋಪ (ಅಥವಾ ಅವರ ವರದಿ) ಪ್ರಕಟವಾದರೆ ಅದೇ ಪತ್ರಿಕೆಯಲ್ಲೇ ಆ ಬಗ್ಗೆ ಸ್ಪಷ್ಟೀಕರಣ ಅಥವಾ ವಿವರಣೆ ಕೊಡುವುದು ಪತ್ರಿಕಾ ರಂಗದಲ್ಲಿನ ಒಂದು ಶಿಷ್ಟ ಸತ್ಸಂಪ್ರದಾಯ. ಇದು ಎಲ್ಲಾ ಮಟ್ಟದ ಪತ್ರಿಕೆಗಳಿಗೂ ವ್ಯಕ್ತಿ/ಸಂಸ್ಥೆಗಳಿಗೂ ಅನ್ವಯಿಸುತ್ತದೆ. 'ದೀವಟಿಗೆ' ಓದುವ ಎಷ್ಟು ಜನ ಆ ಇನ್ನೊಂದು ಪತ್ರಿಕೆ ಓದುತ್ತಾರೆ, ಅಲ್ಲವೆ? —ಸಂ]

## ಬಾಲಕೃಷ್ಣರಿಗೆ ಬೀಳ್ಕೊಡುಗೆ

ಕೊಪ್ಪ: ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿದ್ದ ಬಾಲಕೃಷ್ಣ ಅವರಿಗೆ ವರ್ಗವಾಗಿದ್ದು, ಅವರ ಸ್ಥಾನದಲ್ಲಿ ವೆಂಕಟಯ್ಯ ಎಂಬುವರು ಹೊಸ ಎ. ಎ. ಇಂ. ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಬಾಲಕೃಷ್ಣರನ್ನು ಬೀಳ್ಕೊಡುವ ಹಾಗೂ ವೆಂಕಟಯ್ಯ ಅವರನ್ನು ಸ್ವಾಗತಿಸುವ ಸರಳ ಸಮಾರಂಭವೊಂದು ಇಲ್ಲಿನ ತಾ. ಅ. ಮಂಡಳಿಯಲ್ಲಿ ಮೇ ೧೪ ರಂದು ಬಿ. ಜಿ. ಚಿದಂಬರ್ ರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆ. ಬಾಲಣ್ಣಗೌಡ ಸ್ವಾಗತಿಸಿದರು. ಜಿ. ಪಿ. ನೀಲಕಂಠ ಭಟ್, ಬಿ. ಕೆ. ಶಾಮಣ್ಣ ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಮಾತನಾಡಿದರು. ಬಿ. ಆರ್. ಪರಮೇಶ್ವರ ವಂದಿಸಿದರು.

## "ಆರೋಪ ನಿರಾಧಾರ"

### ಜಿ. ಪಿ. ನೀಲಕಂಠ ಭಟ್ಟರ ಹೇಳಿಕೆ

(೧ ನೇ ಪುಟದಿಂದ)

ಅಷ್ಟೇ ಹೊರತು, ಯಾವೂ ಅವ್ಯವಹಾರ ನನ್ನ ಕಾಲದಲ್ಲಿ ನಡೆದಿಲ್ಲ. ಅನಂತರ ಅಧ್ಯಕ್ಷರ ಅಭಿವೃದ್ಧಿ ಕೆಲಸಗಳ ಬಗ್ಗೆ ರಾಜೀನಾಮೆ ಕೇಳಿ ೬ ಮಂದಿ ನಿರ್ದೇಶಕರು (೫ ರ ಪೈಕಿ) ನಿರ್ಣಯ ಮಾಡಿರುತ್ತಾರೆ. ಆ ದಿನ ನಾನು ಅನಿವಾರ್ಯ ಕಾರಣದಿಂದಾಗಿ ನಿರ್ದೇಶಕರಿಗೆ ತಿಳಿಸಿದ್ದೆ. ಬೇರೆ ನಾನು ಅಧ್ಯಕ್ಷತೆ ವಹಿಸಿದ್ದೆ. ಅಷ್ಟೆ. ಕಾರ್ಯದರ್ಶಿಗಳು ಮೀಟಿಂಗ್ ನಡವಳಿಕೆಗಳನ್ನು ಬರೆದಿರುತ್ತಾರೆ.

೨. ಪಂಚಾಯ್ತಿ ನೀರು ಸರಬರಾಜು ಮತ್ತು ಹಣದ ವಿಚಾರದಲ್ಲಿ, ಮಾಸ್ಟರ್ ರಾಘವೇಂದ್ರ ರಾಯರು ಕಾರ್ಯದರ್ಶಿಗಳ ವಶ ಹಣ ಕೊಟ್ಟಿದ್ದಾರೆ. ಕಾರ್ಯದರ್ಶಿಗಳು ರಶೀದಿ ಕೊಟ್ಟಿದ್ದಾರೆ. ಶ್ರೀ ಹೆಚ್. ಎಸ್. ಮಂಜುನಾಥ್‌ರವರು, ಅವರಿಗೆ ನೀರು ಕೊಡಲು, ಕೆಲಸದವನಿಗೆ ಹೇಳಿ ನೀರು ಕೊಡಿಸಿದ್ದಾರೆ. ಪಂಚಾಯ್ತಿ ತೀರ್ಮಾನವಿಲ್ಲದೇ, ಶ್ರೀ ಹೆಚ್. ಎಸ್. ಮಂಜುನಾಥ್‌ರವರು, ಹೊಸ ಪೈಪ್ ಕನೆಕ್ಷನ್ ಮೂಲಕ ನೀರು ಒದಗಿಸಲು ತಿಳಿಸಿರುವುದು ಸರಿಯಲ್ಲವೆನ್ನುವುದು ಉಳಿದ ಸದಸ್ಯರ ಅಭಿಪ್ರಾಯ. ಈ ವಿಷಯ ಚರ್ಚಿಸುವ ಮೊದಲೇ, ಶ್ರೀ ಹೆಚ್. ಎಸ್. ಮಂಜುನಾಥ್‌ರವರು ಮೀಟಿಂಗ್‌ನಿಂದ ಹೊರಟುಹೋಗಿದ್ದರು. ಹೇಳಿಕಳಿಸಿದರೂ ಬರಲಿಲ್ಲ. ಈ ವಿಷಯದಲ್ಲಿ ಯಾರನ್ನೂ ಆಪಾದಿಸುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನೊಂದು ಕಡೆ, ಹಿಂದೆ ೪ ಜನರಿಗೆ ನಲ್ಲಿ ನೀರಿನ ಸರಬರಾಜನ್ನು ಒಂದಂಗುಲ ಪೈಪು ಲೈನಿನಿಂದ ಅರ್ಧಂಗುಲ ಪೈಪು ಮೂಲಕ ಕೊಟ್ಟಿತ್ತು. ಈಗ ಆರೇಳು ಮಂದಿ ಅದೇ ಸ್ಥಳದಿಂದ ನೀರು ಸರಬರಾಜು ಮಾಡಲು ಕೇಳಿದ್ದರಿಂದ ಎರಡಂಗುಲ ಪೈಪು ಲೈನ್ ಹಾಕಿಕೊಳ್ಳಲು, ಎಲ್ಲಾ ಪಂಚಾಯ್ತಿ ಸದಸ್ಯರ ಅಭಿಪ್ರಾಯಕ್ಕೆ ಕಳಿಸಿ, ಹೆಚ್ಚು ಮಂದಿ ಸದಸ್ಯರು ಒಪ್ಪಿಗೆ ಕೊಟ್ಟದ್ದರ ಮೇಲೆ, ೪ ಜನರಿಗೂ ಹಿಂದೆ ನೀರು ಸರಬರಾಜಾಗುತ್ತಿದ್ದುದು ನಿಂತು ಅವರು ತೊಂದರೆ ಪಡುತ್ತಿರುವುದನ್ನು ಮನಗಂಡು (೪ ಪೈಕಿ ಇಬ್ಬರು ಉಪಾಧ್ಯಾಯರು) ಅವರಿಗೆ ಒಂದೂವರೆ ಇಂಚು ಪೈಪು ಮೂಲಕ ನೀರು ಪಡೆಯಲು ಅನುಮತಿ ನೀಡಿದೆ. ಅಷ್ಟೇ ಹೊರತು ನೀರಿನ ವ್ಯವಸ್ಥೆ ಹದಗೆಟ್ಟಿಲ್ಲ.

ಪಂಚಾಯ್ತಿ ತೀರ್ಮಾನಿಸಿದಂತೆ ನಡೆಸಿಕೊಳ್ಳುವುದು ನನ್ನ ಕರ್ತವ್ಯ. ಲೋಪವಾಗಿದ್ದರೆ ಬದಲಾಯಿಸಲು ಪಂಚಾಯ್ತಿಯವರಿಗೆ ಅವಕಾಶವಿದೆ. ಈ ವಿಷಯವನ್ನು ಬೆಳೆಸುತ್ತಾ ಹೋಗಲು ಇಷ್ಟಪಡುವುದಿಲ್ಲ. ಇವೆಲ್ಲ ಮೀಟಿಂಗ್‌ನಲ್ಲಿ ಚರ್ಚಿಸಿ ತೀರ್ಮಾನಿಸತಕ್ಕ ವಿಷಯಗಳು. ಇಷ್ಟ ಸಾಕು. ಎಲ್ಲರಿಗೂ ವಂದನೆಗಳು.

ಹರಿಹರಪುರ. —ಜಿ ಪಿ. ನೀಲಕಂಠ ಭಟ್ಟ

## ಕಡಿದ ದಾಂಪತ್ಯ ಕೂಡಿಸಿದ ಪೋಲೀಸರು

ನ. ರಾ. ಪುರ: ಮೂರು ವರ್ಷದಿಂದ ಕಡಿದುಹೋಗಿದ್ದ ದಾಂಪತ್ಯ ನ. ರಾ. ಪುರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆರ್. ಲಕ್ಷ್ಮಣ್‌ರ ಕ್ರಮದಿಂದಾಗಿ ಪುನಃ ಕೂಡಿಕೊಂಡಿರುವುದಾಗಿ ತಿಳಿದು ಬಂದಿದೆ.

ಹೊರಕಟ್ಟೆ ಗ್ರಾಮದ ಬಟ್ಟೆಮನೆ ಹಡ್ಲುಹಾಸಿ ಚೆನ್ನ ಎಂಬಾತ ಮೂರು ವರ್ಷದಿಂದ ತೌರುಮನೆಯಲ್ಲಿ ಬಿಟ್ಟಿದ್ದ ಹೆಂಡತಿ ಗೌರಿಯನ್ನು ತೊರೆದು ಮೇ ೨ ರಂದು ಬೇರೊಂದು ಮದುವೆ ಆಗಲು ಸಿದ್ಧತೆ ನಡೆಸಿದ್ದನೆಂದೂ, ಏ. ೩೦ ರಂದು ಗೌರಿ ಕೊಟ್ಟ ದೂರಿನ ಮೇಲೆ ನ. ರಾ. ಪುರ ಪೋಲೀಸರು ಕೇಸು ದಾಖಲೆ ಮಾಡಿಕೊಂಡು, ಮದುವೆ ನಿಲ್ಲಿಸಿ, ಹಳೇ ಸಂಬಂಧವನ್ನೇ ಪುನಃ ಬೆಸೆದು ಸೌಹಾರ್ದ ಸ್ಥಾಪಿಸಿದರೆಂದು ಲಕ್ಷ್ಮಣ್ 'ದೀವಟಿಗೆ' ಗೆ ತಿಳಿಸಿದ್ದಾರೆ.

## ವಿಲಾಚಾರ್ಯರ ಪ್ರವಚನ

ಕೊಪ್ಪ: ಹಿಮಾಲಯದಿಂದ ಬಂದಿರುವ ವಿಲಾಚಾರ್ಯ ಸಿದ್ಧಾಂತ ಚಕ್ರವರ್ತಿ ವಿದ್ಯಾನಂದ ಮುನಿಗಳ ಪ್ರವಚನವನ್ನು ಇಲ್ಲಿನ ವಿಶ್ವ ಹಿಂದೂ ಪರಿಷತ್ ಆಶ್ರಯದಲ್ಲಿ ಈಚೆಗೆ ಏರ್ಪಡಿಸಲಾಗಿತ್ತು. ವಿಶ್ವಮಾನವ ಧರ್ಮವನ್ನು ಪ್ರತಿಪಾದಿಸಿದ ವಿಲಾಚಾರ್ಯರು, ನಾವು ಸುಖವಾಗಿರುವುದಲ್ಲದೆ ನಮ್ಮ ಸುತ್ತಮುತ್ತಲಿನ ಎಲ್ಲ ಮಾನವರೂ ಸುಖ-ಶಾಂತಿಯಿಂದ ಬಾಳುವಂತೆ ಮಾಡಲು ಅನುವು ಮಾಡಿಕೊಡುವುದೇ ಅದರ ತಿರುಳು ಎಂದು ಹೇಳಿ, ಶಾಂತಿ ಮತ್ತು ಸಹಬಾಳ್ವೆಯನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪರೋಪಕಾರಿಯಾಗಿರಬೇಕೆಂದು ಉಪದೇಶಿಸಿದರು.

ಜಿ. ಎಸ್. ವಿ. ಮೂರ್ತಿ ಸ್ವಾಗತಿಸಿದರು. ಜಿ. ಬ್ರಹ್ಮಪ್ಪ ವಿದ್ಯಾನಂದ ಮುನಿಗಳನ್ನು ಪರಿಚಯಿಸಿದರು. ಎ. ರಾಮರಾವ್ ವಂದಿಸಿದರು.

## ಅಕ್ರಮವಾಗಿ ಮರ ಸಾಗಿಸಲು ಪೋಲೀಸ್ ಅಧಿಕಾರಿ ಯತ್ನಿಸಿದ ಆರೋಪ

ಚಿಕ್ಕಮಗಳೂರು: ಇಲ್ಲಿನ ಕರ್ನಾಟಕ ಸಾ ಮಿಲ್ಲಿಗೆ ಮುತ್ತೋಡಿ ರೇಂಜಿನ ಖಾಸಗಿ ಯವರೊಬ್ಬರ ತೋಟದಿಂದ ಸುಮಾರು ೧೫ ಸಾವಿರ ರೂ. ಬೆಲೆ ಬಾಳುವ ೧೫೦ ಘನ ಅಡಿಯಷ್ಟು (ಒಂಭತ್ತು ದಿಮ್ಮಿ) ನಂದಿ ಮರಗಳನ್ನು ಅಕ್ರಮವಾಗಿ ಸಾಗಿಸಲಾಗಿದ್ದು, ಅದನ್ನು ಅರಣ್ಯ ಇಲಾಖೆ ಮುಟ್ಟುಗೋಲು ಹಾಕಿಕೊಂಡಿದೆ.

ಈ ದಿಮ್ಮಿಗಳ ಸಾಗಣೆಯಲ್ಲಿ ಒಬ್ಬ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ೧೨ ಜನ ಪೇದೆಗಳು ಹಾಗೂ ಪೋಲೀಸ್ ಜೀಪನ್ನು ಬಳಸಿರುವುದಾಗಿ ವರದಿಯಾಗಿದ್ದು. ಒಬ್ಬ ಹಿರಿಯ ಪೋಲೀಸ್ ಅಧಿಕಾರಿ ಈ ದಿಮ್ಮಿಗಳನ್ನು ಅಕ್ರಮವಾಗಿ ಪಡೆದಿದ್ದಾರೆಂದು ಆಪಾದಿಸಲಾಗಿದೆ.

ಈ ಕುರಿತು ಪೋಲೀಸ್ ಹಾಗೂ ಅರಣ್ಯ ಇಲಾಖೆಗಳು ಪ್ರತ್ಯೇಕವಾಗಿ ತನಿಖೆ ಆರಂಭಿಸಿವೆ. ಪತ್ರಕರ್ತರು ಈ ಅಕ್ರಮ ವ್ಯವಹಾರವನ್ನು ಬೆಳಕಿಗೆ ತಂದಿದ್ದಾರೆಂದೂ ವರದಿ.



ನಂ. ಹಿ. ವ. ಬಿ. (2) ಸಿ. ಆರ್. 14/ 82-83 ತಾ. 13-5-82

## ಪ್ರಕಟಣೆ

ಶೃಂಗೇರಿಯಲ್ಲಿ ನಡೆಯುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಕ್ಕೆ 1982-83 ನೇ ಸಾಲಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು. ವಿದ್ಯಾರ್ಥಿ ನಿಲಯದಲ್ಲಿ ಉಚಿತ ಊಟ, ಬಟ್ಟೆ, ವಸತಿ, ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ವಿದ್ಯಾರ್ಥಿ ನಿಲಯಕ್ಕೆ ಸೇರ ಬಯಸುವ ವಿದ್ಯಾರ್ಥಿಗಳು ನಿಗದಿ ಮಾಡಿರುವ ಅರ್ಜಿ ಫಾರಂಗಳೊಂದಿಗೆ ಕಳೆದ ಸಾಲಿನ ಅಂಕ ಪಟ್ಟಿ (ಮಾರ್ಕ್ಸ್ ಕಾರ್ಡ್) ಮತ್ತು ಈ ವರ್ಷದ ಆದಾಯ ಮತ್ತು ಜಾತಿ ಸರ್ಟಿಫಿಕೇಟುಗಳೊಂದಿಗೆ ಅರ್ಜಿಯನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗಾಗಲಿ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಗಾಗಲಿ ದಿನಾಂಕ 25-5-82 ರ ಒಳಗಾಗಿ ಸಲ್ಲಿಸತಕ್ಕದ್ದು. ನಿಗದಿಯಾದ ಅರ್ಜಿ ಫಾರಂಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳವರ ಕಛೇರಿಯಲ್ಲಿ ಪಡೆಯಬಹುದು. ಆದಾಯ ಪತ್ರ ಫಾರಂ ನಂ. 1,2 ಅಥವಾ 3 ರಲ್ಲಿದ್ದರೆ ಮಾತ್ರ ಗಮನಿಸಲಾಗುತ್ತೆ. ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುವ ಎಲ್ಲಾ ವರ್ಗದ ವಿದ್ಯಾರ್ಥಿಗಳನ್ನೂ ಕಾನೂನಿನಂತೆ ಸೇರಿಸಿಕೊಳ್ಳಲಾಗುತ್ತೆ.

(ಸಹಿ)

ಕ್ಷೇತ್ರಾಭಿವೃದ್ಧಿ ಅಧಿಕಾರಿ,
ಅಭಿವೃದ್ಧಿ ಕ್ಷೇತ್ರ, ಶೃಂಗೇರಿ.

ಸಂಪಾದಕ, ಪ್ರಕಾಶಕ, ಮುದ್ರಕ: ಹಿರೇಮನೆ ನಾಗರಾಜ್. ಅಚ್ಚು: ನೇಸರ ಮುದ್ರಣ, ಕೊಪ್ಪ